# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ, ಬೆಂಗಳೂರು.

ಸಂಖ್ಯೆ: ಸ.ಅ/ವಾ-46/ಪಿ.ಆರ್/ 07 /2020-21 ದಿನಾಂಕ:13-01-2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 08-01-2021 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ.ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 | ಹಾಜರಿ |
| 3. | ಶ್ರೀ.ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿಗಳು ವಾಡ್ ನಂ: 46 | ಗೈರು ಹಾಜರಿ |
| 4. | ಶ್ರೀ.ಹೆಚ್.ಮೂರ್ತಿ | ಕಂದಾಯ ವಸೂಲಿದಾರರು ವಾರ್ಡ್ ನಂ: 46 | ಹಾಜರಿ |
| 5. | ಶ್ರೀ.ಮಂಜುನಾಥ್.ಕೆ.ಎನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) | ಹಾಜರಿ |
| 6. | ಶ್ರೀ.ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ:46 | ಹಾಜರಿ |
| 7. | ಶ್ರೀ.ರಾಜಣ್ಣ | ಕಂದಾಯ ಅಧಿಕಾರಿ ಜೆ.ಸಿ ನಗರ | ಹಾಜರಿ |
| 8. | ಶ್ರೀ.ಸುವರ್ಣದೇವಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 9. | ಶ್ರೀ.ಭಾಷಾ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 10. | ಶ್ರೀ.ಕೇತನ್ | ಅಸೆಸರ್ | ಹಾಜರಿ |
| 11. | ಶ್ರೀ.ರವೀಂದ್ರ | ಅರಣ್ಯಾಧಿಕಾರಿಗಳು | ಹಾಜರಿ |
| 12. | ಶ್ರೀ ಮನೋಹರ್ | ಬೆಸ್ಕಾಂ ಇಲಾಖೆ | ಗೈರು ಹಾಜರಿ |
| 13. | ಶ್ರೀ.ಎನ್.ಶಿವಪ್ಪ | ಘನ ತ್ಯಾಜ್ಯ ಸೂಪ್ರವೈಸರ್ | ಗೈರು ಹಾಜರಿ |
| 14. | ಶ್ರೀ.ರಾಜು.ಎಂ | ಘನ ತ್ಯಾಜ್ಯ ಸೂಪ್ರವೈಸರ್ | ಗೈರು ಹಾಜರಿ |
| 15. | ಶ್ರೀಲಕ್ಷ್ಮೀಕಾಂತ್ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ | ಗೈರು ಹಾಜರಿ / ಹಾಜರಿ |
| 16. | ಶ್ರೀ.ಹರೀಶ್‌ರೆಡ್ಡಿ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ | ಹಾಜರಿ |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಯುವರಾಜ್.ಬಿ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಜಿ.ರವೀಂದ್ರ, ಭಾ.ಸ.ಸೇ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಸ್ವ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ತಿಮ್ಮಯ್ಯ ಗಾರ್ಡನ್‌ನ ಲಿಂಗಪ್ಪ ಬ್ಲಾಕ್‌ನಲ್ಲಿ ವಿದ್ಯುತ್ ಕಂಬವನ್ನು ಹಾಕಲು ಗುಂಡಿಯನ್ನು ಅಗೆದಿದ್ದು, ಗುಂಡಿಯನ್ನು ಸರಿಯಾಗಿ ಮುಚ್ಚಿರುವುದಿಲ್ಲ ಇದನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು. ಇದರ ಬಗ್ಗೆ ಕ್ರಮವಹಿಸುವಂತೆ ಬೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಸೂಚಿಲಾಯಿತು.
- ವಾರ್ಡ್‌ನ ರಸ್ತೆ ಬದಿಯಲ್ಲಿ ಅಂತರ್ಜಾಲ ಸಂಪರ್ಕದ ಕೇಬಲ್ ವೈರ್‌ಗಳು ಜೋತಾಡುತ್ತಿದ್ದು ಅವುಗಳನ್ನು ತೆರವುಗೊಳಿಸಿ ಸರಿಪಡಿಸಲು ಕೋರಿದರು.
- ಬಿ.ಡಿ.ಎ ಕಾಂಪ್ಲೆಕ್ಸ್ ಹಿಂಬದಿಯ ರಸ್ತೆಯಲ್ಲಿ ಕಸ ಎಸೆಯುತ್ತಿರುತ್ತಾರೆ ಅದಕ್ಕೆ ಸಂಬಂಧಿಸಿದಂತೆ ಎಸ್.ಡಬ್ಲ್ಯೂ.ಎಂ. ಮತ್ತು ಬಿ.ಬಿ.ಎಂ.ಪಿ ಮಾರ್ಷಲ್‌ಗಳಿಗೆ ದಂಡ ವಿಧಿಸುವಂತೆ ಅಥವಾ ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.
- ತರಳುಬಾಳು ರಸ್ತೆ ಮತ್ತು ವಾರ್ಡ್‌ನ ಇನ್ನಿತರೆ ರಸ್ತೆಗಳಲ್ಲಿ ವೀಲೀಂಗ್ ಹೆಚ್ಚಾಗಿದ್ದು, ಅದರ ಬಗ್ಗೆ ಸೂಕ್ತ ಕ್ರಮಕ್ಕೈಗೊಳ್ಳುವಂತೆ ಕೋರಿದರು.
- ದಿಣ್ಣೂರು ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ಬ್ಲಾಕ್ ಆಗಿದ್ದು, ಅದನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು. ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದು, ಈಗಾಗಲೇ ದುರಸ್ಥಿ ಕಾರ್ಯವನ್ನು ಕೈಗೊಂಡಿರುವುದಾಗಿ ತಿಳಿಸಿದರು.
- ಚುಂಚಪ್ಪ ಬ್ಲಾಕ್‌ನಲ್ಲಿ ಬೀದಿ ದೀಪಗಳ ಕೊರತೆಯಿದ್ದು, ಕೊರತೆಯಿರುವ ಬೀದಿಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕೋರಿದರು. ಮತ್ತು ಕೆಲವೊಂದು ಕಂಬಗಳಲ್ಲಿ ಡಿ.ಪಿ ಸ್ವಿಚ್ ಇರುವುದಿಲ್ಲ ಅಂತಹ ಕಂಬಗಳಿಗೆ ಸ್ವಿಚ್‌ಗಳನ್ನು ಅಳವಡಿಸಲು ಕೋರಿದರು.
- ಚುಂಚಪ್ಪ ಬ್ಲಾಕ್‌ನಲ್ಲಿ ಕೆಲವೊಂದು ಮನೆಗಳಲ್ಲಿ ಕಾವೇರಿ ನೀರನ್ನು ಯಥೇಚ್ಛವಾಗಿ ಪೋಲು ಮಾಡುತ್ತಿದ್ದು, ಅಂತಹ ಮನೆಗಳಿಗೆ ದಂಡ ವಿಧಿಸಲು ಅಥವಾ ಸೂಕ್ತ ಕ್ರಮ ಜರುಗಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- 5ನೇ ಕ್ರಾಸ್ ಮೋತಿ ನಗರದಲ್ಲಿ ಕಸ ಸಂಗ್ರಹಣೆ ವಾಹನವು ಸಮಯಕ್ಕೆ ಸರಿಯಾಗಿ ಬರದೆ ಇರುವುದರಿಂದ ಕಸದ ಸಮಸ್ಯೆಯು ಹೆಚ್ಚಾಗಿರುತ್ತದೆ ಇದನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು. ಸಭೆಯಲ್ಲಿ ಹಾಜರಿದ್ದ ಎಸ್.ಡಬ್ಲ್ಯೂ.ಎಂ. ಅಧಿಕಾರಿಗಳು ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.
- ವಾರ್ಡ್‌ನಲ್ಲಿ ಕಟಾವು ಮಾಡಿದ ಮರಗಳ ಜಾಗದಲ್ಲಿ ಹೊಸದಾಗಿ ಸಸಿಗಳನ್ನು ನೆಡಲು ಯೋಜನೆ ರೂಪಿಸುವಂತೆ ತಿಳಿಸಲಾಯಿತು.
- ವಾರ್ಡ್‌ನಲ್ಲಿನ ಒಣಗಿದ ಮರಗಳನ್ನು ಮತ್ತು ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಾರ್ವಜನಿಕರು ಕೋರಿದರು.
- ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ಇದರ ಬಗ್ಗೆ ಸೂಕ್ತ ಕ್ರಮ ವಹಿವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಕೋರಿದರು. ಅದಕ್ಕೆ ಸಂಬಂಧಪಟ್ಟಂತೆ ಅನಿಮಲ್ ಹಸ್‌ಬೆನ್ಡ್ರಿಯವರ ಜೊತೆ ಮಾತನಾಡಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.

- ದೇವೆಗೌಡ ಮುಖ್ಯರಸ್ತೆಯಲ್ಲಿ ಮೀನಿನ ಪುಷ್‌ಕಾಟ್ ಅಂಗಡಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಮೀನಿನ ಪುಷ್‌ಕಾಟ್ ಅಂಗಡಿಗಳನ್ನು ತೆರವುಗೊಳಿಸಲು ಅಥಾವ ಸೂಕ್ತ ಕ್ರಮ ವಹಿಸಲು ಕೋರಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು | ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್ ನಂ: 46, ಜೆ.ಸಿ.ನಗರ | ವಾರ್ಡ್ ನಂ: 46, ಜೆ.ಸಿ ನಗರ |

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.